ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಪರೀಕ್ಷೆಮೌಲ್ಯಮಾಪನ ನಿಬಂಧನೆಗಳಿಗೆ ಒಳಪಟ್ಟು ಅದರ ಮಾರ್ಗಸೂಚಿಯಲ್ಲಿ ಹೆಚ್ಚುವರಿ ತಿಳುವಳಿಕೆ ಕೊಟ್ಟು ಮುಖ್ಯಪರೀಕ್ಷಕರ ನಿರ್ದೇಶನದ ಅಡಿಯಲ್ಲಿ ನಡೆಸಲಾಗುತ್ತದೆ. ಮತ್ತು ಕನ್ನಡ ಸೀನಿಯರ್ ಇದರಲ್ಲಿ ಮಾರ್ಕ್ಸ್ ಬಹಳ ಕಡಿಮೆ ಕೊಟ್ಟಿದ್ದಾರೆ ಎನ್ನುವ ಸಂಶಯವನ್ನು ಏನು ವ್ಯಕ್ತಪಡಿಸಿದ್ದೀರಿ ಅದಕ್ಕೆ ಸರಿಯಾದಂಥ ಆಧಾರ ಇಲ್ಲ ಎನ್ನತಕ್ಕ ಮಾತನ್ನು ಈ ಅಂಕಿಅಂಶಗಳ ಮೂಲಕ ತಮಗೆ ತಿಳಿಸುತ್ತೇನೆ. 1989 ರಲ್ಲಿ 36 ಪರ್ಸೆಂಟ್ ಇದ್ದು ೯೦ರಲ್ಲಿ ೪೮ ಪರ್ಸೆಂಟ್ ತೇರ್ಗಡೆಯಾಗಿದ್ದರೆ ನವೆಂಬರ್‌ನಲ್ಲಿ ೪೧ ಪರ್ಸೆಂಟ್ ಆಗಿದ್ದಾರೆ. ಈಗಿನ ಜುಲೈನಲ್ಲಿ 50 ಪರ್ಸೆಂಟ್ ತೇರ್ಗಡೆಯಾಗಿದ್ದಾರೆ. ಆದ್ದರಿಂದ ಈ ಒಂದು ಸಂಶಯಕ್ಕೆ ಎಡೆ ಮಾಡಿ ಕೊಡತಕ್ಕಂಥ ಪರಿಸ್ಥಿತಿ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ನನ್ನ ಒಂದು ಮಾಹಿತಿ ಪ್ರಕಾರ ಟೈಪರೈಟಿಂಗ್‌ನಲ್ಲಿ ಅನುಭವ ಇರುವುದಿಲ್ಲವೆಂದು ನಾನು ಹೇಳುತ್ತಿಲ್ಲ, ಅವರು ಪರೀಕ್ಷೆಯಲ್ಲಿ ಪಾಸಾದ ನಂತರ ಅವರು ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಸೆಕ್ಷನ್ ಆಫೀಸರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ತಾವು ಕಳುಹಿಸಿಕೊಡುತ್ತೀರಿ. ಹಾಗಾಗಿ ಇವತ್ತು ಸಾಕಷ್ಟು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ನಾನೇನು ಸೂಚನೆ ಮಾಡುತ್ತೇನೆಂದರೆ ಈ ಕಾಮರ್ಸ್ ಇನ್‌ಸ್ಟಿಟ್ಯೂಟ್ ಪ್ರಿನ್ಸಿಪಾಲ್ ಮತ್ತು ಟೀಚರ್ಸ್ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಹೆಚ್ಚು ಅನುಭವ ಇರುತ್ತದೆ ಅಂತಹವರನ್ನು ವ್ಯಾಲು ವೇಶನ್ ಜವಾಬ್ದಾರಿ ಕೊಟ್ಟರೆ ಸೂಕ್ತ ಆಗಬಹುದು ಎಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉತ್ತಮ ಸಲಹೆ ಪರಿಶೀಲನೆ ಮಾಡುತ್ತೇನೆ.

ಚಾಮರಾಜನಗರದಲ್ಲಿ ವಿದ್ಯುತ್ ಕೊರತೆ

3266 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ವಿದ್ಯುತ್ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚಾಮರಾಜನಗರದಲ್ಲಿ ವಿದ್ಯುತ್ ಪೂರೈಕೆ ಸ್ಥಿತಿಯನ್ನು ಉತ್ತಮ ಪಡಿಸಲು ಸರ್ಕಾರದ ಯಾವ ಕಾರ್ಯಕ್ರಮವನ್ನು ರೂಪಿಸಿದೆ?

ಇ) ಚಾಮರಾಜನಗರ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ತಿನ ಲೋವೋಲ್ಟೇಜನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಚಾಮರಾಜನಗರದಲ್ಲಿ ಇತರೆ ಪಟ್ಟಣಗಳಲ್ಲಿರುವಂತೆ ಹಗಲು ಸಮಯದಲ್ಲಿ ವಿದ್ಯುತ್ ಒತ್ತಡದ ಕಾಲದಲ್ಲಿ ಲೋಡ್ ಷೆಡ್ಡಿಂಗ್ ಮಾಡಲಾಗುತ್ತಿದೆ.

ಆ) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯನ್ನು ಉತ್ತಮಪಡಿಸಲು ಹೂಟಗಳ್ಳಿಯಿಂದ ನಂಜನಗೂಡು ಮತ್ತು ಚಾಮರಾಜನಗರಕ್ಕೆ ಹೋಗುವ 66 ಕೆ. ವಿ. ವಿದ್ಯುತ್ ಮಾರ್ಗಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಆಯಾ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಆಗಲು ವ್ಯವಸ್ಥೆಗೊಳಿಸಲಾಗಿದೆ ಮತ್ತು ಇದಲ್ಲದೆ 12.5 ಎಂ. ವಿ. ಎ. ಸಾಮರ್ಥ್ಯದ ಒ. ಎಲ್. ಟಿ.ಸಿ. ವುಳ್ಳ ಟ್ರಾನ್ಸ್‌ಫಾರ್ಮರ್‌ನ್ನು

ವಿದ್ಯುದ್ಬಲವು ಉತ್ತಮಗೊಂಡಿದೆ. ಅಲ್ಲದೆ ಓವರ್‌ಲೋಡ್‌ನಿಂದ ಆಗುವ ವಿದ್ಯುತ್ ನಿಲುಗಡೆ ಕಡಿಮೆ ಆಗಿದೆ.

ಇ) ಚಾಮರಾಜನಗರ ತಾಲ್ಲೂಕಿನಲ್ಲಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜನ್ನು ಉತ್ತಮಪಡಿಸಲು ರೈನ್ ಟ್ಯಾಪ್ ಆಫ್, ಉಪ- ವಿದ್ಯುತ್ ಕೇಂದ್ರಗಳನ್ನು ಹರವೆ, ಚಂದರವಾಡಿ ಮತ್ತು ಸಂತಮಾರೇನಹಳ್ಳಿ ಇವುಗಳಲ್ಲಿ ಹಾಕಲು ಯೋಚಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಚಾಮರಾಜನಗರ ತಾಲ್ಲೂಕಿನಲ್ಲಿ ನಿರಂತರವಾಗಿ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ನಾನು ಈ ಸಭೆಯಲ್ಲಿ ಅನೇಕ ಭಾರಿ ಹೇಳಿದ್ದೆ. ಹಿಂದೆ ವಿದ್ಯುಚ್ಛಕ್ತಿ ಸಚಿವರಾದ ಶ್ರೀ ಪುಟ್ಟಸ್ವಾಮಿಗೌಡರು ಇದನ್ನು ಸರಿ ಮಾಡುವ ಬಗ್ಗೆ ಒಂದು ಸಭೆ ಕರೆದಿದ್ದರು. ನಾವು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ. ಅಲ್ಲಿ ನಿರಂತರವಾಗಿ ಅತ್ಯಂತ ತೊಂದರೆಯನ್ನು ಜನರು ಅನುಭವಿಸುತ್ತಿದ್ದಾರೆ. ಕಳೆದ 5-6 ವರ್ಷಗಳಿಂದ ನೀರಾವರಿ ಪಂಪ್‌ಸೆಟ್‌ಗಳಿಗೆ ತೊಂದರೆಯಾಗಿದೆ. ಈಗ ಇರತಕ್ಕಂಥ ಕೆ. ಇ. ಬಿ. ಛೇರ್ಮನ್‌ರು ಚಾಮರಾಜನಗರಕ್ಕೆ ಬಂದಿದ್ದಾಗ ಅವರು ಹೇಳಿದರು ಏನು ಇದು ದೀಪ ಉರಿದಂತೆ, ಲೈಟ್ ಉರಿಯುತ್ತಿವೆ ಇದು ನಮ್ಮ ಕೆ.ಇ. ಬಿ.ಗೆ ಅಗೌರವಾಗುತ್ತದೆ ಎನ್ನತಕ್ಕಂಥ ಮಾತನ್ನು ಅವರು ವ್ಯಕ್ತ ಪಡಿಸಿ ಬಂದಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಪ್ರಾಮಾಣಿಕ ಪ್ರಯತ್ನಮಾಡಿ ನನ್ನ ತಾಲ್ಲೂಕಿಗೆ ಸಮಗ್ರ ವಿದ್ಯುಚ್ಛಕ್ತಿ ಒದಗಿಸಿಕೊಡುವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ : ಮಾನ್ಯ ಅಧ್ಯಕ್ಷರೇ, ನಾವು ಶಿವಪ್ಪೊಗ್ಗದಿಂದ ಮೈಸೂರಿಗೆ ಒಂದು ಲೈನ್ ತೆಗೆದುಕೊಂಡು ಹೋಗುತ್ತಿದ್ದೇವೆ. ನಿಮಗೆ ಆಗ ಸರಿಯಾದ ರೀತಿ ಕರೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಅನುಕೂಲ ಆದರೆ ಸಾಕು. ಕೂಡಲೇ ಏನು ವ್ಯವಸ್ಥೆ ಮಾಡುತ್ತೀರಿ?

ಶ್ರೀ ಎಂ.ರಾಮಪ್ಪ : ಅನುಕೂಲ ಮಾಡಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಬೇಕಾಗಿಲ್ಲ. ನನ್ನ ಹತ್ತಿರ ಸಾಕಷ್ಟು ಕರೆಂಟ್ ಇದೆ. ಆದರೆ ನಮ್ಮ ತಾಲೋಕಿಗೆ ಕರೆಂಟ್ ಬೇಕು ಅಷ್ಟೇ.

ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಬಿಡುಗಡೆ

3400 - ಶ್ರೀಮತಿ ಮೋಟಮ್ಮ (ಮೂಡಿಗೆರೆ ಕ್ಷೇತ್ರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಪರಿಶಿಷ್ಟ ಜಾತಿ : ವರ್ಗಗಳ ಸಂಸ್ಥೆಗಳಿಗೆ ಅನುಧಾನ ಬಿಡುಗಡೆ ಮಾಡದಂತೆ ಟೆಲೆಕ್ಸ್ ಮೆಸೇಜನ್ನು ಜಿಲ್ಲಾ ಪರಿಷತ್ತುಗಳೀಗೆ ನೀಡಿರುವುದರಿಂದ ಆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಜೀವನ ದುರ್ಬರವಾಗಿರುವುದು ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿದೆಯೇ?*

ಆ) *ಚನ್ನರಾಯಪಟ್ಟಣ ಗೌತಮ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ಪ್ರೌಢ ಶಾಲೆ ಪ್ರಾಥಮಿಕ ಶಾಲೆಗಳಿಗೆ 85-86ರಿಂದಲೂ ಅನುಧಾನ ಬಿಡುಗಡೆ ಮಾಡದಿರುವುದು*